# ಖಳನ ಪಾತ್ರಕ್ಕೆ ಜೀವ ತುಂಬುವ ಕಲಾವಿದ

ಅಕ್ಕಿಹೆಬ್ಬಾಳು ನಾಗರಾಜ್

ರಂಗ ಸಾಧಕ



ಬಯಲಿನಲ್ಲಿ ಹಾಕಿದ್ದು ಮೂರು ವೇದಿಕೆಗಳು. ನಾಟಕ ಒಂದೆ, ಒಂದೊಂದು ವೇದಿಕೆಯಲ್ಲೂ ದೃಶ್ಯಗಳು ಮೂಡಿ ಬರುತ್ತಿದ್ದವು. ಸಿನಿಮಾ ರೀತಿ ಪ್ರೇಕ್ಷಕರಿಗೂ ಚೋದ್ಯ, ಹೊಸ ರೀತಿಯ ಪ್ರದರ್ಶನಕ್ಕೆ ಕುತೂಹಲದ ವೀಕ್ಷಣೆ, ಮೆಚ್ಚುಗೆಯ ಸುರಿಮಳೆ.

ಹಾಸನದಲ್ಲಿ ತಮ್ಮ ಗೆಳೆಯ ಆರ್.ವಿ. ಗೌಡ ಅವರ ಜೊತೆಯಲ್ಲಿ ಮಾಡಿದ ಹೊಸ ರಂಗ ಪ್ರಯೋಗವನ್ನು ನೆನಪು ಮಾಡಿಕೊಳ್ಳುತ್ತಾರೆ ನೀರಾವರಿ ಇಲಾಖೆಯ ನಿವೃತ್ತ ಅಧಿಕಾರಿ, ರಂಗ ಕಲಾವಿದ ಎಸ್.ಎಸ್. ಪುಟ್ಟೇಗೌಡ.

ಕಲ್ಲೂರು ಶ್ರೀನಿವಾಸರಾಯರ ಸಾರಥ್ಯದಲ್ಲಿ ಕುರುಕ್ಷೇತ್ರದ ಕೃಷ್ಣನ ಪಾತ್ರದಲ್ಲಿ 10 ಜನ, ದುರ್ಯೋಧನನ ಪಾತ್ರದಲ್ಲಿ 5 ಮಂದಿ ಸ್ಪರ್ಧಾ ಮನೋಭಾವದಿಂದ ಅಭಿನಯಿಸಿದ್ದರು. ಅದರಲ್ಲಿ ಪುಟ್ಟೇಗೌಡರೂ ಪಾತ್ರ ಮಾಡಿದ್ದರು.



ಎಸ್.ಎಸ್.ಪುಟ್ಟೇಗೌಡ

ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಶಂಭುನಾಥಪುರದ ಸಂಕೇಗೌಡರ ಮಗ ಪುಟ್ಟೇಗೌಡರು ಬಾಲ್ಯದಿಂದಲೂ ರಂಗಭೂಮಿಯ ವಾತಾವರಣದಲ್ಲಿ ಬೆಳೆದವರು. ನಾಟಕಗಳನ್ನು ನೋಡಲು ಸ್ಥಳ ಸಿಗದಿದ್ದಾಗ ಇದ್ದ ಚಿಕ್ಕಜಾಗದಲ್ಲೇ ಮಂಡಿ ಊರಿಕೊಂಡು ಇಡೀ ರಾತ್ರಿ ನಾಟಕ ನೋಡುತ್ತಿದ್ದ ಛಲಗಾರ. ಅಷ್ಟು ಒಲವು ಬಾಲ್ಯದಲ್ಲಿಯೇ ಇವರಿಗೆ. ಹಾಸನ ಜಿಲ್ಲೆಯಲ್ಲಿ ತೊಗಲು ಬೊಂಬೆ ಕಲಾವಿದರು ಹೇರಳವಾಗಿದ್ದಾರೆ.

ಅವರು ವರ್ಷಕ್ಕೊಮ್ಮೆ ಶಂಭುನಾಥಪುರಕ್ಕೆ ಬಂದು ಕ್ಯಾಂಪ್ ಮಾಡಿ ಬೀದಿಗೊಂದರಂತೆ ಆಟ ಆಡುತ್ತಿದ್ದರು. 'ಅಭಿಮನ್ಯು ಕಾಳಗ', 'ವಿರಾಟಪರ್ವ' 'ಕಿರಾತಾರ್ಜುನೀಯ', 'ಬಕಾಸುರವಧೆ', 'ರಾಮಾಯಣ', 'ಮಹಾಭಾರತ' ಕಥೆಗಳನ್ನು ನೋಡಿ, ಕೇಳಿದ ಬಾಲಕನಿಗೆ ಸಹಜವಾಗಿಯೇ ಅವುಗಳ ಬಗ್ಗೆ ಒಲವು ಮೂಡಿತು.

ಉದ್ಯೋಗ ಸಿಕ್ಕ ನಂತರ ತಮ್ಮ 32ನೇ ವಯಸ್ಸಿನಲ್ಲಿ ಬೇಲೂರು ಕೃಷ್ಣಮೂರ್ತಿ ವಿರಚಿತ 'ಕಲೆಯ ಕೊಲೆ' ನಾಟಕಕ್ಕೆ ಬಣ್ಣ ಹಚ್ಚಿದರು. ನಂತರ ಹಾಸನದ ದನಗಳ ಜಾತ್ರೆಯ ಸಂದರ್ಭದಲ್ಲಿ ವಸ್ತು ಪ್ರದರ್ಶನದ ವೇದಿಕೆಯಲ್ಲಿ ಮೊದಲ ಬಾರಿಗೆ 'ದಾನಶೂರ ಕರ್ಣ' ನಾಟಕದಲ್ಲಿ ಅಭಿನಯಿಸಿ ಮೆಚ್ಚುಗೆ ಗಳಿಸಿದರು. ನಾಟಕದ ಮೇಷ್ಟ್ರು ಪದ್ಮರಾಜಯ್ಯ ಇವರ ಮೊದಲ ಗುರು. ನಂತರ 'ಕುರುಕ್ಷೇತ್ರ', 'ಭಕ್ತಪ್ರಹ್ಲಾದ', 'ರಾಜಸೂಯಯಾಗ', 'ಸತ್ಯಹರಿಶ್ಚಂದ್ರ', 'ರಾಮಾಯಣ' ಮುಂತಾದ ನಾಟಕಗಳಲ್ಲಿ ಪ್ರತಿ ನಾಯಕನ ಪಾತ್ರಗಳಲ್ಲಿ ಹಲವು ಸಾರಿ ಅಭಿನಯಿಸಿದರು. ಮೂಲತಃ ಸಾಹಿತ್ಯ ವಿದ್ಯಾರ್ಥಿಯಾದ ಇವರು ಅಭಿನಯ, ರಂಗಭೂಮಿಯ ಬಗ್ಗೆ ಹಲವಾರು ಲೇಖನಗಳನ್ನು ಬರೆದಿದ್ದಾರೆ.

'ಛಲದೊಳ್ ದುರ್ಯೋಧನಂ' ಎಂಬ ಪೌರಾಣಿಕ ನಾಟಕ ರಚನೆ ಮಾಡಿದ್ದು, ಅದನ್ನು ಮೈಸೂರಿನಲ್ಲಿ ಯಶಸ್ವಿಯಾಗಿ ಪ್ರದರ್ಶಿಸಿದರು. ಇದಲ್ಲದೆ ಹಲವು ನಾಟಕಗಳ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಪುಟ್ಟೇಗೌಡ ಅವರು, ಮೈಸೂರಿನ ಶಾರದಾದೇವಿ ಬಡಾವಣೆಯ ನಿವಾಸಿ. ಹಾಸನ, ತುಮಕೂರು, ಬೆಂಗಳೂರು, ಮೈಸೂರಿನಲ್ಲಿ ಪಾತ್ರಗಳನ್ನು ಮಾಡಿರುವ ಗೌಡರು, ನಿವೃತ್ತ ಜೀವನದಲ್ಲಿ ಪೂರ್ಣವಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವುದು ಮೆಚ್ಚುವ ವಿಷಯ.

ಬೆಂಗಳೂರಿನ ಪ್ರತಿಭಾ ಅಕಾಡೆಮಿ ವತಿಯಿಂದ 'ರಾಜ್ಯಭೂಷಣ' ಪ್ರಶಸ್ತಿ, ಭಾರತ ಯುವ ಕೇಂದ್ರದಿಂದ 'ರಾಜ್ಯರತ್ನ' ಪ್ರಶಸ್ತಿ, ಬೆಂಗಳೂರಿನ ಅನ್ನಪೂರ್ಣೇಶ್ವರಿ ನಾಟಕ ಸಂಘದಿಂದ 'ವೀರಸಿಂಧೂರ ಲಕ್ಷಣ' ಪ್ರಶಸ್ತಿ, ಮೈಸೂರಿನ ಗ್ರಾಮಾಂತರ ಬುದ್ಧಿಜೀವಿಗಳ ಬಳಗದಿಂದ 'ಸುವರ್ಣ ಕರ್ನಾಟಕ ಸೇವಾ ಪ್ರಶಸ್ತಿ' ಗಳಲ್ಲದೆ ಹಲವಾರು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ❖

# ಅರ್ಬನ್ ಹಾತ್; ಕರಕುಶಲ ವಸ್ತುಗಳ ಆಗರ



ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಕುಶಲಕರ್ಮಿಗಳು ತಯಾರಿಸಿದ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡಲಾಗುತ್ತಿದೆ.

ಕೇಂದ್ರ ಸರ್ಕಾರದ ಜವಳಿ ಸಚಿವಾಲಯದ ಸಹಯೋಗದಲ್ಲಿ ಈ ಕರಕುಶಲ ವಸ್ತುಪ್ರದರ್ಶನವು ಭಾನುವಾರದವರೆಗೆ (ಮೇ 26) ನಡೆಯಲಿದೆ. 50ಕ್ಕೂ ಅಧಿಕ ಮಳಿಗೆಗಳಿವೆ.

### ಮೇಳದಲ್ಲಿ ಏನೇನಿವೆ?

ರಾಜ್ಯ ಸೇರಿದಂತೆ ಜಮ್ಮು, ಕಾಶ್ಮೀರ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಉತ್ತರ ಪ್ರದೇಶ, ದೆಹಲಿ, ಗುಜರಾತ್, ಒಡಿಶಾ, ಅಂಧ್ರ ಪ್ರದೇಶ, ತಮಿಳುನಾಡು, ರಾಜಸ್ಥಾನ, ಬಿಹಾರ, ಛತ್ತೀಸ್‌ಗಡ, ಮಧ್ಯಪ್ರದೇಶ, ಕೇರಳ ಮೊದಲಾದ ರಾಜ್ಯಗಳ ಕುಶಲಕರ್ಮಿಗಳು ತಮ್ಮ ರಾಜ್ಯದ ಕರಕುಶಲ ವಸ್ತುಗಳನ್ನು ಪ್ರದರ್ಶಿಸಿ ಮಾರಾಟ ಮಾಡುತ್ತಿದ್ದಾರೆ.

ಮಕ್ಕಳಿಂದ ವೃದ್ಧರಿಗೂ ಒಪ್ಪುವ, ಕೈಗೆಟಕುವ ಬೆಲೆಯಲ್ಲೂ ಉಡುಪುಗಳು ಮಳಿಗೆಗಳಲ್ಲಿ ಇವೆ. ಬೇಸಿಗೆಯ ಬೇಗೆಯಲ್ಲಿ ದೇಹವನ್ನು ತಂಪಾಗಿರಿಸುವ ಹತ್ತಿಯ, ಖಾದಿ ಬಟ್ಟೆಗಳು ಮನಸೆಳೆಯುತ್ತವೆ.

ಸಲ್ವಾರ್ ಕಮೀಜ್, ಬೊಟಿಕ್, ರೇಷ್ಮೆ ಸೀರೆಗಳು, ಕಾಟನ್ ಸೀರೆಗಳು, ಮಧುಬನಿ, ಕಾಂಜೀವರಂ ಸೀರೆಗಳ ಸಂಗ್ರಹವೂ ಗಮನಸೆಳೆಯುತ್ತವೆ.

### ಆಲಂಕಾರಿಕ ವಸ್ತುಗಳು

ಮಣ್ಣಿನ ದೀಪಗಳು, ಚರ್ಮ, ಸೆಣಬಿನ ಚೀಲಗಳು, ಟ್ರಾವೆಲ್ ಬ್ಯಾಗ್‌ಗಳು, ಚರ್ಮದ ಚಪ್ಪಲಿಗಳು, ಬಿದಿರಿನ ಕೀ ಚೈನ್‌ಗಳು, ಪರ್ಸ್‌ಗಳು ಆಕರ್ಷಕವಾಗಿವೆ. ನಗರ ಸಾರಿಗೆ ಬಸ್ ನಿಲ್ದಾಣದಿಂದ ಬಸ್ ಸಂಖ್ಯೆ 117 ಮೇಳದ ಸ್ಥಳಕ್ಕೆ ಬರುತ್ತದೆ. ವಿಶಾಲವಾದ ಪಾರ್ಕಿಂಗ್ ವ್ಯವಸ್ಥೆಯೂ ಇದೆ. ಮಾಹಿತಿಗೆ ಮೊ: 9686677232 ಸಂಪರ್ಕಿಸಬಹುದು. ❖

# ಚೂಡಾಕರ್ಮದ ತಾತ್ವಿಕ ಅಂಶಗಳು

ತಾರೋಡಿ ಸುರೇಶ

**ಆಯುರ್ವೇದದ** ಪ್ರಕಾರ ತಲೆಯ ಮುಂಭಾಗಕ್ಕೆ ಸೂರ್ಯಕಿರಣಗಳು ಬೀಳುವಂತಿರಬೇಕು. ಅದರಿಂದ ಆರೋಗ್ಯ, ಅಧ್ಯಾತ್ಮ ಹಾಗೂ ದೇವತಾಪ್ರಸನ್ನತೆಗೆ ಸಂಬಂಧಪಟ್ಟ ಕೇಂದ್ರಗಳು ಪ್ರಬೋಧಗೊಳ್ಳುತ್ತವೆ. ಅದನ್ನು ಅಡ್ಡಿಪಡಿಸುವ ಕೂದಲುಗಳನ್ನು ತೆಗೆಸಬೇಕು. ಶಿಖಾಸ್ಥಾನದಲ್ಲಿ ಶಿಖೆಯನ್ನಿರಿಸಿಕೊಳ್ಳಬೇಕು. ಶಿಖಾಸ್ಥಾನದ ಒಳಭಾಗದಲ್ಲಿ 'ಅಧಿಪತಿ' ಎಂಬ ಮರ್ಮಸ್ಥಾನವಿದೆ. ಅದನ್ನು ಸಂರಕ್ಷಿಸಿಕೊಳ್ಳಬೇಕು. ಅಲ್ಲಿಗೇನಾದರೂ ಏಟು ಬಿದ್ದರೆ ಪ್ರಾಣಾಪಾಯ. ಅಲ್ಲಿ ಕೂದಲನ್ನು ಚೆನ್ನಾಗಿ ಬೆಳೆಸಬೇಕು.

ಆದರೆ ಶಿಖೆಯು ಕೇವಲ ಭೌತಿಕ ಲಾಭಕ್ಕಾಗಿ ಮಾತ್ರವಲ್ಲ. 'ತಪೋಧ್ಯಾನಗಳಲ್ಲಿ ಆಳವಾಗಿ ಮುಳುಗಿದ ಮಹರ್ಷಿಗಳು ಸಮಾಧಿಸ್ಥಿತಿಯಲ್ಲಿ ಒಂದು ಜ್ಞಾನಶಿಖೆಯನ್ನು ದರ್ಶನ ಮಾಡುತ್ತಾರೆ. ಆ ಶಿಖೆಯ ಮಧ್ಯದಲ್ಲಿ ಪರಮಾತ್ಮನು ವಿರಾಜಮಾನನಾಗಿದ್ದಾನೆ. ಶಿಖೆಗೆ ಒಳಗಿನ ಜ್ಞಾನಶಿಖೆಯೇ ಮೂಲ' ಎಂದು ಶ್ರೀರಂಗ ಮಹಾಗುರುಗಳು ಇದಕ್ಕೆ ವಿವರಣೆಯನ್ನು ಕೊಟ್ಟಿದ್ದರು.'ತಸ್ಯಾ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ' ಎಂಬ ಮಾತಿದೆ. ಈ ಹೊರಗಿನ ಶಿಖೆಯು ಒಳಶಿಖೆಯ ಸ್ಮರಣೆಯನ್ನು ಕೊಡುತ್ತದೆ.

ಆ ಸ್ಮರಣೆಯೂ ಒಂದು ಸಂಸ್ಕಾರವೇ. ಶಿಖೆಯು ಗೋವತ್ಸಪಾದದ ಆಕಾರದಲ್ಲಿರಬೇಕು ಎಂದು ಶಾಸ್ತ್ರಗಳು ವಿಧಿಸುತ್ತವೆ. ಶಿಖೆಯು ವೃತ್ತಾಕಾರದಲ್ಲಿರಬೇಕು ಮತ್ತು ಮುಷ್ಟಿಯಲ್ಲಿ ಹಿಡಿದರೆ ಒಂದು ಅಂಗುಷ್ಠದ ಗಾತ್ರವಿರಬೇಕು ಎಂದು ಶ್ರೀರಂಗ ಮಹಾಗುರುಗಳು ಸೂಚಿಸಿದ್ದರು.

ಇದು ಬ್ರಹ್ಮಸ್ಥಾನ. ಯಾವುದೇ ಕರ್ಮವನ್ನು ಆಚರಿಸುವಾಗಲೂ ಬದ್ಧಶಿಖಿಯಾಗಿ ಮಾಡಬೇಕು ಎಂಬ ನಿಯಮವಿದೆ. ಇಲ್ಲದಿದ್ದರೆ ಕರ್ಮವು ವ್ಯರ್ಥವಾಗುತ್ತದೆ. ಅದನ್ನು ಸ್ವಲ್ಪ ಬಿಗಿಯಾಗಿ ಗಂಟು ಹಾಕಬೇಕು. ಇದು ಊರ್ಧ್ವದಲ್ಲಿರುವ ಜ್ಞಾನದ ಕೇಂದ್ರದತ್ತ ಮನಸ್ಸು ಮತ್ತು ಪ್ರಾಣಗಳನ್ನು ಮೇಲಕ್ಕೇರಿಸಿ ಜ್ಞಾನಪ್ರಬೋಧಕ್ಕೆ ಪೋಷಕವಾಗುತ್ತದೆ ಇದೇ ನಿಯಮವು ಸ್ತ್ರೀಯರಿಗೂ ಅನ್ವಯಿಸುತ್ತದೆ. ಅವರೂ ಜಡೆ ಹಾಕಿಕೊಳ್ಳದೆ ಅಥವಾ ಕೂದಲನ್ನು ಗಂಟು ಹಾಕಿಕೊಳ್ಳದೇ ಯಾವ ಕರ್ಮವನ್ನೂ ಮಾಡಬಾರದು.

ಸ್ತ್ರೀಯರಿಗೆ ಚೂಡಾಕರ್ಮವು ಉಂಟೇ ಎಂಬ ಪ್ರಶ್ನೆ ಸಹಜ. ಹಿಂದೆ ಅವರಿಗೆ ಸಾಂಕೇತಿಕವಾಗಿ ಮಾಡುತ್ತಿದ್ದರು. ಈಗಲೂ ಕೇರಳದಲ್ಲಿ ಅದರ ಅವಶೇಷಗಳುಂಟು. ಅವರಿಗೆ ತಲೆಯನ್ನು ಪೂರ್ತಿ ಮುಂಡನ ಮಾಡಿಸಬಹುದು ಅಥವಾ ಶಿಖೆಯನ್ನು ಇಡಬಹುದು. ಸ್ತ್ರೀಯರು ಸಹಜವಾಗಿಯೇ ಕೋಮಲ ಪ್ರಕೃತಿಯವರು.

ಕುಂಡಲಿನೀ ಶಕ್ತಿಯು ಪುರುಷರಿಗಿಂತ ಸ್ತ್ರೀಯರಲ್ಲಿ ವಿಶೇಷಪ್ರಮಾಣದಲ್ಲಿ ಕೆಲಸ ಮಾಡುತ್ತವೆ ಎಂದು ಯೋಗಸಾಹಿತ್ಯಗಳು ಕೊಂಡಾಡುತ್ತವೆ. ಭಕ್ತಿಯೂ ಅವರಿಗೆ ಸುಲಭವಾಗಿ ಒಲಿಯುತ್ತದೆ. ಜೀವಿಗಳನ್ನು ವಿಕಾಸಗೊಳಿಸುವ ವಿಶೇಷ ಜವಾಬ್ದಾರಿಯು ಅವರಿಗೆ ಪ್ರಕೃತಿಸಹಜವಾಗಿ ಒದಗಿಬಂದಿದೆ.

ಅದಕ್ಕೆ ತಕ್ಕ ಮಾಂಗಲ್ಯದ ಕೇಂದ್ರಗಳು, ಅಂಗಾಂಗಗಳು ಅವರಲ್ಲಿ ವೈಶಿಷ್ಟ್ಯಪೂರ್ಣವಾಗಿದ್ದು ಅವುಗಳನ್ನು ಸಂರಕ್ಷಿಸಿಕೊಳ್ಳಬೇಕಾಗುತ್ತದೆ. ಸದಾ ಕೂದಲನ್ನು ಕತ್ತರಿಸಿಕೊಳ್ಳುವುದರಿಂದ ಅವುಗಳಲ್ಲಿ ದೋಷಗಳ ಸಂಕ್ರಮಣವಾಗುತ್ತವೆ. ಎಲ್ಲರಿಗೂ ಒಂದೇ ನಿಯಮ ಸರಿಯಲ್ಲ.

ಸಂನ್ಯಾಸಿಗಳು ಮತ್ತು ಯತಿಸ್ಥಾನದಲ್ಲಿರುವ ಮಡಿಹೆಂಗಸರು ಕೇಶವಪನವನ್ನು ಆಯುವೃದ್ಧಿಗಾಗಿ ಮಾಡದೆ ಕೇವಲ ಪಾವಿತ್ರ್ಯಕ್ಕಾಗಿ ಮಾಡಿಕೊಳ್ಳುತ್ತಾರೆ. ಕ್ಷೇತ್ರ ಇತ್ಯಾದಿಗಳಲ್ಲಿ ದೇವರಿಗೆ ಕೇಶ ಸಮರ್ಪಣೆಯು (ಮುಂಡನ) ಮಂಗಲವಾದ ಕರ್ಮವೇ. ಹಿಂದೆ ಮೊದಲೇ ಸ್ನಾನಾದಿಗಳನ್ನು ಮಾಡಿ ಶುದ್ಧರಾಗಿ ನಂತರ ಮುಂಡನ ಮಾಡಿಸಿಕೊಂಡು ಭಗವದರ್ಪಣೆ ಮಾಡುತ್ತಿದ್ದರು. ಕಾಶಿಯಲ್ಲಿ ಮುಂಡನದ ಜಾಗವನ್ನು ಮುಂಡನ್ ಆಶ್ರಮ್ ಎಂದೇ ಕರೆಯುತ್ತಾರೆ.

ಚೌಲದಲ್ಲಿ ಬಳಸುವ ದ್ರವ್ಯಗಳು, ಮಂತ್ರಗಳು, ಕತ್ತರಿಸುವುದರ ವಿಜ್ಞಾನ, ದೇವತೆಗಳೆಂದರೆ ಯಾರು, ನಾಪಿತನನ್ನು ನೋಡುವಿಕೆ- ಹೀಗೆ ಒಂದೊಂದು ವಿಷಯದಲ್ಲಿಯೂ ಅನೇಕ ಮರ್ಮಗಳನ್ನು ಋಷಿಗಳು ಇಟ್ಟಿದ್ದಾರೆ. ಒಂದೆರಡನ್ನು ಮಾತ್ರ ಇಲ್ಲಿ ವಿವೇಚಿಸಲಾಗಿದೆ. ❖






ಚಿಣ್ಣರ ಚಿತ್ರ

ಶ್ರೀ ಶಾರದಾ ಪಬ್ಲಿಕ್ ಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಎಸ್.ಮೈತ್ರಿ ಬಿಡಿಸಿದ ಚಿತ್ರ

## ನಗೆಹನಿ



### ಟೇಕ್ ಯುವರ್ ಸೀಟ್

**ಅಪ್ಪ:** ಕೆಲಸ ಮುಗಿಸಿ ಮನೆಗೆ ಬಂದೊಡನೆ ಹೊಸ ಕುರ್ಚಿಯನ್ನು ಕಂಡು ಆಶ್ಚರ್ಯನಾಗಿ ಮಗನನ್ನು ಕೇಳಿದ 'ಎಲ್ಲಿಂದ ಬಂತೋ ಈ ಹೊಸ ಕರ್ಚಿ'

**ಮಗ:** 'ಅಪ್ಪ ಬೆಳಿಗ್ಗೆ ನಾನು ಸಂದರ್ಶನಕ್ಕೆ ಹೋಗಿದ್ದೆ, ಆಗ ಸಂದರ್ಶಕರು 'ಟೇಕ್ ಯುವರ್ ಸೀಟ್' ಅಂದರು' ಅದಕ್ಕೆ ಕುರ್ಚಿ ತೆಗೆದುಕೊಂಡು ಬಂದೆ' ಎಂದ.

### 'ಹೆರಿಗೆ ಆಸ್ಪತ್ರೆ'

**ಹುಡುಗ:** ನರ್ಸ್ ನೀವು ತುಂಬಾ ಸುಂದರವಾಗಿದ್ದಿರಿ, ಯಾವ ಆಸ್ಪತ್ರೆಯಲ್ಲಿ ಕೆಲಸ ಮಾಡೋದು?

**ನರ್ಸ್:** ಯಾಕೆ?

**ಹುಡುಗ:** ನನಗೇನಾದ್ರೂ ಆ್ಯಕ್ಸಿಡೆಂಟ್ ಆದ್ರೆ ನಿಮ್ಮ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗೋಕೆ....

**ನರ್ಸ್:** ನೀವು ನಮ್ಮ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಬೇಕಾದ್ರೆ ದೊಡ್ಡ ಪವಾಡವೇ ನಡೆಸಬೇಕು

**ಹುಡುಗ:** ಯಾಕೆ ?

**ನರ್ಸ್:** ಯಾಕಂದ್ರೆ ನಮ್ದು ಹೆರಿಗೆ ಆಸ್ಪತ್ರೆ

## ನೀವೂ ಕಳುಹಿಸಿ



'ಮೆಟ್ರೊ' ಕುಂದುಕೊರತೆ, ಕ್ಯಾಂಪಸ್ ಕಲರವ, ಲೇಖನ ಕಳುಹಿಸಲು...

ಇ ಮೇಲ್: mysoremetro@prajavani.co.in

ವಾಟ್ಸ್ಆ್ಯಪ್; 95133 22937

## ಕುಂದು ಕೊರತೆ

### ಕಸ ವಿಲೇವಾರಿಯಾಗಲಿ



ಚಾಮರಾಜಮೊಹಲ್ಲಾದ 1ನೇ ಅಡ್ಡರಸ್ತೆಯಲ್ಲಿ ಸ್ಥಳೀಯರು ಸುರಿದಿರುವ ತ್ಯಾಜ್ಯದಿಂದ ಅಶುಚಿತ್ವ ಉಂಟಾಗಿದೆ. ರಸ್ತೆಯಲ್ಲಿ ಕಸದ ತೊಟ್ಟಿಯೂ ಇಲ್ಲದಿರುವುದರಿಂದ ದಿನೇ-ದಿನೇ ಸೊಳ್ಳೆಗಳ ಕಾಟ ಹೆಚ್ಚಾಗುತ್ತಿದೆ. ಸ್ಥಳೀಯ ನಿವಾಸಿಗಳಿಗೆ ಸಾಂಕ್ರಾಮಿಕ ರೋಗ ಹರಡುವ ಭೀತಿ ಉಂಟುಮಾಡಿದೆ. ಈಚೆಗೆ ಮಳೆ ಸುರಿದಿದ್ದರಿಂದ, ತ್ಯಾಜ್ಯ ಇನ್ನಷ್ಟು ಕೊಳೆಯುತ್ತಿದೆ.

ಆದ್ದರಿಂದ ಪಾಲಿಕೆ ಅಧಿಕಾರಿಗಳು ಪೌರಕಾರ್ಮಿಕರಿಗೆ ಸೂಚಿಸಿ, ತ್ಯಾಜ್ಯ ತೆರವುಗೊಳಿಸಬೇಕು.

**ಹರೀಶ್ ಎಸ್.,** ಚಾಮರಾಜಮೊಹಲ್ಲಾ



### ರಸ್ತೆಗಳ ಅಕ್ಕಪಕ್ಕ ಶುಚಿತ್ವ ಕಾಪಾಡಿ

ವಾರ್ಡ್ ಸಂಖ್ಯೆ 36ರ ಎಂ.ಎನ್.ಜೋಯಿಸ್ ರಸ್ತೆಯಲ್ಲಿ ಸ್ಥಳೀಯರು ಸುರಿದಿರುವ ತ್ಯಾಜ್ಯದಿಂದ ಅಶುಚಿತ್ವ ತಾಂಡವವಾಡುತ್ತಿದೆ. ತ್ಯಾಜ್ಯದಿಂದ ಹೊರಬರುತ್ತಿರುವ ಗಲೀಜು ನೀರು ರಸ್ತೆ ಮಧ್ಯದಲ್ಲೇ ಹರಿಯುತ್ತಿದೆ. ಇದರೊಂದಿಗೆ ಚರಂಡಿ ನೀರು ಸೇರಿ ಗಬ್ಬು ನಾರುತ್ತಿದೆ. ಇಲ್ಲಿ ಕಸದ ತೊಟ್ಟಿಯನ್ನು ಅಳವಡಿಸದೇ ಇರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು.

**ಅಭಿಷೇಕ್,** ಚಾಮರಾಜಮೊಹಲ್ಲಾ

### ರಸ್ತೆ ಸುರಕ್ಷತೆಗೆ ಕ್ರಮ ಕೈಗೊಳ್ಳಿ

ನಗರದ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಮುಂಭಾಗದ ವರ್ತುಲ ರಸ್ತೆಯಲ್ಲಿ ಅಪಘಾತಗಳನ್ನು ತಡೆಯಲು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು. ಇದರಿಂದ ಅಪಘಾತಗಳ ಸಂಖ್ಯೆ ಕಡಿಮೆಯಾಗಿತ್ತು. ಆದರೆ, ಕೆಲವು ದಿನಗಳ ಹಿಂದೆ ಕಿಡಿಗೇಡಿಗಳು ಬ್ಯಾರಿಕೇಡ್‌ಗಳನ್ನು ರಸ್ತೆ ಬದಿಗೆ ತಳ್ಳಿದ್ದಾರೆ. ಸುರಕ್ಷತೆಗಾಗಿ ಇಟ್ಟಿದ್ದ ಬ್ಯಾರಿಕೇಡ್‌ಗಳನ್ನು ಮತ್ತೆ ಜೋಡಿಸಬೇಕು. ಹಂಪ್ಸ್‌ಗಳನ್ನು ನಿರ್ಮಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಬೇಕು

**–ವಿಜಯ್ ಹೆಮ್ಮಿಗೆ,** ವಿಜಯನಗರ



### ಒಣಗಿದ ಕೊಂಬೆ ಕಡಿದುಹಾಕಿ



ನಗರದ ಆರ್‌ಟಿಒ ಕಚೇರಿ ಆವರಣದಲ್ಲಿ ಬೆಳೆದಿರುವ ದೊಡ್ಡ ಮರವೊಂದರಲ್ಲಿ ಸಂಪೂರ್ಣ ಒಣಗಿರುವ ದೊಡ್ಡ ಕೊಂಬೆಯೊಂದು ರಸ್ತೆಗೆ ಚಾಚಿಕೊಂಡಿದೆ. ಕೊಂಬೆ ಯಾವುದೇ ಸಂದರ್ಭದಲ್ಲಿ ಬೀಳುವ ಸಾಧ್ಯತೆಗಳಿವೆ. ಸಂಬಂಧಪಟ್ಟ ಅಧಿಕಾರಿಗಳು ಗಮನಿಸಿ ಮರದ ಒಣ ಕೊಂಬೆಗಳನ್ನು ಕಡಿದು ಹಾಕಿಸಲು ಕ್ರಮ ಕೈಗೊಳ್ಳಬೇಕು.

**ರವಿಕುಮಾರ್,** ಸರಸ್ವತಿಪುರಂ

### ಬಸ್ ವ್ಯವಸ್ಥೆ ಕಲ್ಪಿಸಲು ಮನವಿ

ನಗರದ ಕೊಲಂಬಿಯಾ ಏಷಿಯಾ, ಮೇಟಗಳ್ಳಿ, ಶಾರದಾದೇವಿನಗರ ಮಾರ್ಗವಾಗಿ ರಿಂಗ್ ರಸ್ತೆಯಲ್ಲಿ ಸಂಚರಿಸುತ್ತಿದ್ದ 501, 501 'ಎ' ಬಸ್ ಸಂಚಾರವನ್ನು ರದ್ದು ಮಾಡಲಾಗಿದ್ದು, ಈ ಮಾರ್ಗವಾಗಿ ಸಂಚರಿಸುತ್ತಿದ್ದ ಪ್ರಯಾಣಿಕರಿಗೆ ತೊಂದರೆಯುಂಟಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ ಬಸ್ ವ್ಯವಸ್ಥೆ ಕಲ್ಪಿಸಬೇಕು.

**ರಾಜೇಶ್,** ವಿ.ವಿ ಮೊಹಲ್ಲಾ

### ಬಡಾವಣೆಗೆ ಮೂಲಸೌಕರ್ಯ ಒದಗಿಸಿ

ಹೆಬ್ಬಾಳು ಎರಡನೇ ಹಂತವು ಕೈಗಾರಿಕಾ ಪ್ರದೇಶಗಳಿಗೆ ಸಮೀಪವಿರುವ ಕಾರಣ ಹೆಚ್ಚು ಜನ ವಾಸಿಸುವ ಬಡಾವಣೆಯಾಗಿದೆ. ಆದರೆ ಇಲ್ಲಿನ ಬಡಾವಣೆ ನಿವಾಸಿಗಳಿಗೆ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೇರಿದಂತೆ ಯಾವುದೇ ನಾಗರೀಕ ಸೇವಾ ಕೇಂದ್ರಗಳು ಇಲ್ಲದಂತಾಗಿದೆ. ಜೊತೆಗೆ 25ನೇ ಮುಖ್ಯ ರಸ್ತೆಯ ಸಂಕ್ರಾಂತಿ ವೃತ್ತ, ಆರ್ಮಿ ಕ್ವಾಟ್ರಸ್ ಬಳಿಯ ಕೊನೆಯ ತಿರುವು ತೀರಾ ಚಿಕ್ಕದಾಗಿದ್ದು, ಬಸ್ಸುಗಳು ಸಂಚರಿಸಲು ಹರಸಾಹಸ ಪಡುವಂತಾಗಿದೆ. ಅಪಘಾತಗಳು ಹೆಚ್ಚಾಗುತ್ತಿವೆ. ಇದಕ್ಕೆ ಪರ್ಯಾಯವಾಗಿ ಬದಲಿ ರಸ್ತೆಯನ್ನು ನಿರ್ಮಿಸಲು ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

**ರಾಮಕೃಷ್ಣ,** ಹಬ್ಬಾಳು 2ನೇ ಹಂತ

### ಮಠದ ಆವರಣದಲ್ಲಿ ಕಸ ಸುರಿಯದಿರಿ



ಅಗ್ರಹಾರದಲ್ಲಿರುವ ಶಂಕರ ಮಠದ ಮುಂಭಾಗ ಸ್ಥಳೀಯರು ಸುರಿದಿರುವ ತ್ಯಾಜ್ಯ ರಸ್ತೆಗೆ ಹರಡಿದೆ. ಗಬ್ಬು ವಾಸನೆಯಿಂದಾಗಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿದೆ.

ಪೌರಕಾರ್ಮಿಕರು ಬೆಳಿಗ್ಗೆ ವೇಳೆ ಸ್ವಚ್ಛಗೊಳಿಸಿದ ನಂತರ, ಸ್ವಲ್ಪ ಸಮಯದಲ್ಲೇ ಕಸದ ರಾಶಿ ಇರುತ್ತದೆ. ಸಂಬಂಧಪಟ್ಟ ಪಾಲಿಕೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಮಠದ ಆವರಣದ ಸುತ್ತ ಕಸ ಸುರಿಯದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು.

**ಅಹಲ್ಯಾ,** ವಿದ್ಯಾರ್ಥಿನಿ